**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**
**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ:ಗಣಕ/ಸ.ನಡ/01/2017-18 ದಿನಾಂಕ:27.11.2017

**ಸಭಾ ನಡವಳಿಗಳು**

ಏಪ್ರಿಲ್-2018ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ನೋಂದಣಿ ಮಾಹಿತಿಗಳನ್ನು ಎಸ್.ಎ.ಟಿ.ಎಸ್ ಜಾಲತಾಣದಲ್ಲಿ ಅಪ್ ಲೋಡ್ ಮಾಡುವ ಕುರಿತು ದಿನಾಂಕ:23.11.2017ರಂದು ಎಲ್ಲಾ ಜಿಲ್ಲೆಗಳ ನೋಡಲ್ ಅಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ/ ಕಾರ್ಯಗಾರದಲ್ಲಿ ನಡೆದ ಚರ್ಚಾಂಶಗಳು ಕೆಳಕಂಡಂತ್ತಿರುತ್ತದೆ.

ಪ್ರಥಮವಾಗಿ, ಕೆ.ಎಂ.ಗಂಗಾಧರ ಸ್ವಾಮಿ, ಹಿರಿಯ ಸಹಾಯಕ ನಿರ್ದೇಶಕರು, ರವರು ಸ್ವಾಗತ ಕೋರುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯದರ್ಶಿಯವರು ಪ್ರಸ್ತಾವಿಕವಾಗಿ ಮಾತನಾಡಿ ಈ ಕಾರ್ಯಾಗಾರದ ಮಹತ್ವವನ್ನು ವಿವರಿಸಿದರು.

1. ಏಪ್ರಿಲ್-2018ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ನೋಂದಣಿ ಪ್ರಕ್ರಿಯೆ ಈ ಸಾಲಿನಿಂದ ಆನ್‌ಲೈನ್ ಮಾಡಿರುವ ಕುರಿತಂತೆ, ಅದರ ಪ್ರಾಮುಖ್ಯತೆ ಮತ್ತು ಕಳೆದ ಸಾಲುಗಳಲ್ಲಿ ಅನುಸರಿಸುತ್ತಿದ್ದ ಓ.ಎಂ.ಆರ್ ಪದ್ಧತಿಗಿಂತ ಆನ್‌ಲೈನ್ ಯಾವ ರೀತಿಯಲ್ಲಿ ಲಾಭದಾಯಕ ಮತ್ತು ಅದರ ಉಪಯೋಗಗಳ ಕುರಿತು ತಿಳಿಸಲಾಯಿತು.
2. ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡಲು ಯಾವ ಜಾಲತಾಣಗಳ (kseeb.kar.nic.in, www.schooleducation.kar.nic.in and sts.karnataka.gov.in) ಮೂಲಕ ಎಂಬುದನ್ನು ಮನವರಿಕೆ ಮಾಡಿಕೊಡಲಾಯಿತು.
3. ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡುವ ಕುರಿತು, ಅನುಸರಿಸಬೇಕಾದ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ಹಂತ ಹಂತವಾಗಿ ತಿಳಿಸಿಕೊಡಲಾಯಿತು.
4. ಪ್ರತಿ ಶಾಲೆಯ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡುವ ಜವಾಬ್ದಾರಿ ಮುಖ್ಯೋಪಾಧ್ಯಾಯರೇ ನಿರ್ವಹಿಸಬೇಕು ಹಾಗೂ ಎಸ್.ಎ.ಟಿ.ಎಸ್ ನಿಂದ ನೀಡಿರುವ Username and Password ಮಾಹಿತಿ ಗೌಪ್ಯವಾದ್ದರಿಂದ ಯಾರ ಜೊತೆಯಲ್ಲೂ ಹಂಚಿಕೊಳ್ಳಬಾರದೆಂದು ತಿಳಿಸಲಾಯಿತು.
5. ಪ್ರಾತ್ಯಕ್ಷಿಕೆ ಮುಕ್ತಾಯಗೊಂಡ ನಂತರ, ಅವರ ಜಿಲ್ಲೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಚರ್ಚಿಸಲು ಅವಕಾಶ ನೀಡಲಾಯಿತು.
6. ಕಾರವಾರ ಜಿಲ್ಲೆಯ ನೋಡಲ್ ಅಧಿಕಾರಿಯವರು, ಗೋವಾ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎರಡು ಶಾಲೆಯ ವಿದ್ಯಾರ್ಥಿಗಳು ಕಾರವಾರದ ಶಿವಾಜಿ ಶಾಲೆಯ ಮುಖಾಂತರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು, ಆದರೆ ಅವರಿಗೆ ಕರ್ನಾಟಕದ ಎಸ್.ಎ.ಟಿ.ಎಸ್ ಕೋಡ್ ಇಲ್ಲದಿರುವುದರಿಂದ ಅಪ್ ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಈ ಬಗ್ಗೆ

ಹಿರಿಯ ಸಹಾಯಕ ನಿರ್ದೇಶಕರು ಉತ್ತರಿಸಿ, ಸದರಿ ವಿಷಯದ ಕುರಿತಂತೆ ಮಾನ್ಯ ಆಯುಕ್ತರಿಗೆ ಕಡತ ರವಾನಿಸಲಾಗಿದ್ದು, ಮುಂದಿನ ಕ್ರಮದ ಕುರಿತು ತಿಳಿಸಲಾಗುವುದು ಎಂದು ತಿಳಿಸಲಾಯಿತು.

7. ತಂದೆಯ ಹೆಸರು ಕಡ್ಡಾಯ ಮಾಡುವುದನ್ನು ತೆಗೆಯುವಂತೆ ಕೋರಲಾಯಿತು.
8. ಖಾಸಗಿ ಅಭ್ಯರ್ಥಿಗಳಿಗೆ, ದೈಹಿಕ ಸ್ಥಿತಿ ಆಯ್ಕೆಯನ್ನು enable ಮಾಡಲು ಕೋರಲಾಯಿತು, ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.
9. ಖಾಸಗಿ ಅಭ್ಯರ್ಥಿಗಳಿಗೆ, ಮಾಧ್ಯಮ ಆಯ್ಕೆಯನ್ನು enable ಮಾಡಲು ಕೋರಲಾಯಿತು, ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.
10. ನೋಡಲ್ ಅಧಿಕಾರಿಗಳಿಗೆ ಸಭೆಯಲ್ಲಿ ನೀಡಲಾದ ಮಾಹಿತಿಯನ್ನು ತಾಲ್ಲೂಕು ಹಂತದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಸಭೆ ನಡೆಸಿ ಈ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು.
11. ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಮುಖ್ಯ ಶಿಕ್ಷಕರ ಸಭೆ ಕರೆದು ಈ ಪ್ರಕ್ರಿಯೆ ಬಗ್ಗೆ ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮಾಹತಿ ನೀಡಿರುವ ಬಗ್ಗೆ ಜಿಲ್ಲಾ ನೋಡಲ್ ಅಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು.
12. ಈ ಬಗ್ಗೆ ಏನಾದರೂ ತೊಂದರೆಗಳಿದ್ದಲ್ಲಿ ಮಂಡಳಿಯನ್ನು ಸಂಪರ್ಕಿಸಲು ಸೂಚಿಸಿ ದೂರಾವಾಣಿ ಸಂಖ್ಯೆಗಳು ಮತ್ತು ಇ-ಮೇಲ್ ಐಡಿಗಳನ್ನು ನೀಡಲಾಯಿತು.
13. ಆನ್ ಲೈನ್ ಡೇಟಾ ಎಂಟ್ರಿ ಪ್ರಗತಿ ಪರಿಶೀಲನೆಗೆ ಜಿಲ್ಲಾ ಹಂತದಲ್ಲಿ ಅವಕಾಶ ಮಾಡಿಕೊಡಬೇಕೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.
14. ಈ ಪ್ರಕ್ರಿಯೆ ಬಗ್ಗೆ ವೀಡಿಯೋ ಸಂವಾದ ಏರ್ಪಡಿಸಬೇಕೆಂದು ಕೆಲವು ಜಿಲ್ಲೆಗಳಿಂದ ಬೇಡಿಕೆ ವ್ಯಕ್ತವಾಯಿತು.

ರಾಜ್ಯ ಯೋಜನಾ ಕಛೇರಿಯ ಕಿರಿಯ ಕಾರ್ಯಾಕ್ರಮ ಅಧಿಕಾರಿಗಳಾದ ಪುರುಷೋತ್ತಮ ಕುಮಾರ್ ರವರು ಕಾರ್ಯಾಗಾರದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿದರು.

ನಿರ್ದೇಶಕರು, ಪರೀಕ್ಷೆಗಳು

ಹಿರಿಯ ಸಹಾಯಕ ನಿರ್ದೇಶಕರು
ಗಣಕ ಶಾಖೆ